**ಓಎಸ್ ನಂಃ 289/2022      ಡಿ.ಡಬ್ಲ್ಯೂ- 1**

**ದಿನಾಂಕಃ 17.07.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.**

<u>ಪಾಟೀಸವಾಲುಃ ವಾದಿಯ ಪರ ಶ್ರೀ ಎಸ್.ಎನ್.ಎಸ್. ವಕೀಲರಿಂದಃ</u>

ದಾವಾ ಆಸ್ತಿಗೆ ಸಂಬಂಧಿಸಿದಂತೆ ಮೂಲ ದಾಖಲಾತಿಗಳು ಏನು ಇರುತ್ತದೆ ಎಂದರೆ ಸಾಕ್ಷಿ ಕ್ರಯ ಪತ್ರ ಮ್ಯುಟೇಶನ್ , ಆಧಾರ್ ಕಾರ್ಡ್, ಮರಣ ಪ್ರಮಾಣ ಪತ್ರ ಇರುತ್ತವೆ. ನೀವು ಹೇಳಿರುವ ದಾಖಲಾತಿ ಕೊಟ್ಟಿರುತ್ತೀರಾ ಎಂದರೆ ಕೊಟ್ಟಿರುತ್ತೇನೆ. ಮೂಲ ದಾಖಲಾತಿಗಳು ನಿಮ್ಮ ಹತ್ತಿರ ಯಾವುದು ಇಲ್ಲಾ ನಿಮ್ಮ ತಾಯಿ ಕ್ರಯ ಕರಾರು ಪತ್ರ ಮಾಡಿಕೊಟ್ಟಾಗ ವಾದಿ ಲಕ್ಷಮ್ಮ ರವರಿಗೆ ಎಲ್ಲಾ ಮೂಲ ದಾಖಲಾತಿಗಳನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅಂತಹ ಯಾವುದೇ ದಾಖಲಾತಿಗಳು ನಿಮ್ಮ ಹತ್ತಿರ ಇಲ್ಲ ಸುಳ್ಳು ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ. ನೀವಾಗಲಿ ನಿಮ್ಮ ತಾಯಿಗಸಿಯಾಗಲಿ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಕಂದಾಯ ಕಟಟ್ಟಿರುತ್ತೀರಾ ಎಂದರೆ ನಾನು ಕಟ್ಟಿಲ್ಲ ಎನ್ನುತ್ತಾರೆ. ಆಸ್ತಿಗೂ ಹಾಗೂ ನಿಮಗೂ ಸಂಬಂಧ ಇಲ್ಲ ಹಾಗಾಗಿ ಕಂದಾಯ ಕಟ್ಟಿಲ್ಲ ಎಂದರೆ ಸರಿಯಲ್ಲ. ನಿಮ್ಮ ತಾಯಿ ಬದುಕಿರುವವರೆಗೂ ವಾದಿ ಲಕ್ಷ್ಮಮ್ಮ ಅವರಿಗೆ ಬಳಿ ಬಂದು ಕ್ರಯ ಪತ್ರ ಮಾಡಿಕೊಡು ಎಂದು ಕೇಳುತ್ತಿದ್ದರೂ ಎಂದರೆ ಇಲ್ಲ.. ಆ ರೀತಿ ಕೇಳುತ್ತಿದ್ದರೂ ಇಂದು ನಾಳೆ ಎಂದು ಮೂಂದೂಡಿಕೊಂಡು ಬಂದಿರುತ್ತೀರಿ ಎಂದರೆ ಇಲ್ಲ. ನಿಪಿ 12 ಕ್ಕೆ ವೆಂಕಟೇಶರೆಡ್ಡಿ ಮತ್ತು ದೊಡ್ಡರಂಗಪ್ಪ ಸಾಕ್ಷಿ ಸಹಿ ಮಾಡಿರುತ್ತಾರೆ ಎಂದರೆ ಪತ್ರದಲ್ಲಿ ಓದಿ ನೋಡಿರುತ್ತೇನೆ.. ಲಕ್ಷ್ಮಮ್ಮ ರವರಿಗೆ ದೊಡ್ಡ ರಂಗಪ್ಪ ತಂದೆ ಮತ್ತು ವೆಂಕಟೇಶರೆಡ್ಡಿ ಅಣ್ಣ ಆಗಬೇಕು ಎಂದರೆ ವೆಂಕಟೇಶರೆಡ್ಡಿ ಮಾವ ಆಗಬೇಕು ಎನ್ನುತ್ತಾರೆ. ವಾದಿ ದಾವಾ ಆಸ್ತಿಯನ್ನು ನಿಮ್ಮ ತಾಯಿಯಿಂದ ಕೊಂಡುಕೊಂಡಾಗಿನಿಂದಲೂ ಸ್ವಾಧಿನದಲ್ಲಿ ಇರುತ್ತಾರೆ

ಎಂದರೆ ಇಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಸಾ ಓ ಹೇ ಕೇ ಸ ಅದೆ.

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.